8. ಸೂಪರ್‌ಟೆಂಡೆಂಟರವರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ವ್ಯೆಶಿಸಿಕೊಂಡಿರುತ್ತಾರೆ, ಹೀಗೆ ತಿರಸ್ಕರಿಸಲಿಕ್ಕೆ ಯಾವ ನಿಮಿತ್ತವನ್ನೂ ಅವರು ತಿಳಿಸಬೇಕಾದ್ದಿಲ್ಲವು.

9. ಮುಂಜೂರಾದ ದರಖಾಸ್ತುದಾರನ, ಡಿಪಾಜಿಟ್ ಮೊಬಲಗು ನಿಲ್ಲಿಸಿಕೊಳ್ಳಲ್ಪಟ್ಟು, ಆತನು ಕಂಟ್ರಾಕ್ಟು ಮುಚ್ಚಲಿಕ್ಕೆ ಬರದು ಕೊಡಲಿಕ್ಕಾಗಲಿ, ನಗದಾದರೂ ಗವರ್ಮೆಂಟ್ ಪತ್ರಗಳ ಮೂಲಕವಾದರೂ 1,000 ರೂಪಾಯಿಗಳ ಮೊಬಲಗಿಗೆ ಜಾಮೀನನ್ನು ತನ್ನ ದರಖಾಸ್ತು ಮುಂಜೂರಾದ ಸಂಗತಿ ತನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು ಬಂದು ವಾರದ ಒಳಗಾಗಿ ಕೊಡಲಿಕ್ಕೆ ತಪ್ಪಿದರೆ, ಸದರಿ ಡಿಪಾಜಿಟ್ ಸರಕಾರಕ್ಕೆ ಸೇರಿಸಿ ಕೊಳ್ಳಲ್ಪಡುವದು.

10. ಕಂಟ್ರಾಕ್ಟುದಾರನಿಗೆ ನಗದು ಅಡ್ವಾನ್ಸು ಯಾವದೂ ಕೊಡಲ್ಪಡಲಾರದು, ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳಿಗೆ ಪ್ರತಿ ತಿಂಗಳು 1ನೇ ತಾರೀಖಿಗೆ ತರುವಾಯ ಸಾಧ್ಯವಾದಷ್ಟು ತ್ವರೆಯಾಗಿ ಶಿವಮೊಗ್ಗಾ ಜೈಲ್ ಸೂಪರ್‌ಟೆಂಡೆಂಟರವರಿಂದ ಮೊಬಲಗು ಕೊಡಲ್ಪಡುವದು.

11. ಕಂಟ್ರಾಕ್ಟುದಾರನಿಗೆ ಬಂದು ಖೋಲಿಯು ಬಿಡಲ್ಪಟ್ಟು ಅದರಲ್ಲಿ ಆತನು ನಷ್ಟವಾಗದ ದರೋಬಸ್ತು ಪದಾರ್ಥಗಳನ್ನೂ, ಇಟ್ಟುಕೊಳ್ಳಬಹುದು. ಮಾಂಸ ವಗೈರೇ ನಷ್ಟವಾಗುವ ಪದಾರ್ಥಗಳು ಪ್ರತಿ ದಿನ ಬೆಳಿಗ್ಗೆ $7\frac{1}{4}$ ಘಂಟೆಗೆ ಜೈಲ್‌ನಲ್ಲಿ ಇರತಕ್ಕದ್ದು.

12. ಕಂಟ್ರಾಕ್ಟು ವಳ ಪಿಕ್ಕಿಗೆ ಕೊಡಲ್ಪಡಬಹುದು.

13. ಕಂಟ್ರಾಕ್ಟಿನ ನಿಬಂಧನೆಗೆ ತಪ್ಪಿ ನಡೆಯುವ ಬಗ್ಯಾಗಲಿ, ಕಿರದು ತೆರದ ಯಾವ ಪದಾರ್ಥಗಳನ್ನು ಕೊಡುವ ಬಗ್ಯಾಗಲಿ ಶಿವಮೊಗ್ಗಾ ಜೈಲ್ ಸೂಪರ್‌ಟೆಂಡೆಂಟರವರ ಯಖ್ತ್ಯಾರಿಯಿಂದ 50 ರೂಪಾಯಿಗೆ ಮೀರದ ಬಂದು ಜುರ್ಮಾನೆಯು ಹಾಕಲ್ಪಡುವದು, ಬಾರ್ ಬಾರ್ ಆ ಮೇರೆ ತಪ್ಪಿದಲ್ಲಿ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಜಾಮೀನು ಮೊಬಲಗು ಸರ್ಕಾರಕ್ಕೆ ಜೇರಿಸಿಕೊಳ್ಳಲ್ಪಡುವದು.

14. ಕಂಟ್ರಾಕ್ಟು ತಪ್ಪಿ ನಡಿಯುವ ದರೋಬಸ್ತು ಸಂಗತಿಗಳೊಳಗೂ ಶಿವಮೊಗ್ಗಾ ಜೈಲ್ ಸೂಪರ್‌ಟೆಂಟೆಂಟರವರ ನಿರ್ಣಯವೇ ಅಖೈರಾಗಿರತಕ್ಕದ್ದು.

15. ಕಂಟ್ರಾಕ್ಟುದಾರನು ಖೈದಿಗಳ ಉಪಯೋಗಾರ್ಥ ತರಕಾರಿಗಳನ್ನು ದರ ಪಾನಿಗೆ 4 ಕಾಸುಗಳ ಮೇರಿಗೆ ಖಾಯಂ ದರದ ಪ್ರಕಾರ ಜೈಲ್ ತೋಟದಿಂದಲೇ ಕೊಳ್ಳುವದಕ್ಕೆ ಒದ್ದನಾಗಿರತಕ್ಕದ್ದು.

16. ಇನ್ಯಾವ ಸಂಗತಿಯನ್ನಾದರೂ ತಿಳಿಯಬೇಕಾದರೆ ಜೈಲ್ ಸೂಪರ್‌ಟೆರಡೆಂಟರವರನ್ನು ಕೇಳಿ ತಿಳದುಕೊಳ್ಳಬಹುದು.

17. ಅಡಿಗೆ ಮಾಡುವಲ್ಲಿ ಮಡಿಕೆಗಳು ಪಡದು ಹೋಗುವದರಿಂದ ಆಹಾರವೇನಾದರೂ ಅಕಸ್ಮಾತ್ ನಷ್ಟವಾದರೆ ಅದರ ಲುಕ್ಸಾನನ್ನು ಕಂಟ್ರಾಕ್ಟುದಾರನೇ ಕಟ್ಟಿಕೊಡತಕ್ಕದ್ದು.

18. ಹಾಲೀ ಶಿವಮೊಗ್ಗಾ ಜೈಲ್‌ನಲ್ಲಿ 250 ಮಂದಿ ಖೈದೀರಿದ್ದಾರೆ, ಈ ಸಾಲ್‌ನಲ್ಲಿ ಪುಮಾರ್ 300ರ ವರಿಗೆ ಜಾಸ್ತೀಯಾಗಬಹುದಾಗಿ ಅಂದಾಜ್ ಇರುತ್ತೆ.

19. ಆಹಾರ ದರದ ಪಟ್ಟಿಯನ್ನು 1880ನೇ ಇಸವಿ ಜನವರೀ 10ನೇ ಮಕ್ಕುಮಿನ ಮೈಸೂರು ಗೆಜೆಟ್ಟಿನಿಂದಾಗಲಿ, ಶಿವಮೊಗ್ಗಾ ಜೈಲ್ ಸೂಪರ್‌ಟೆಂಡೆಂಟರವರನ್ನು ಕೇಳಿ ಆಗಲಿ ತಿಳದುಕೊಳ್ಳಬಹುದು.

ಪಿ. ಪಂಚನಾಥರಾವ್,
ಜೈಲ್ ಸೂಪರ್‌ಟೆಂಡೆಂಟ್.

ಕಡೂರು ಡಿಸ್ಟ್ರಿಕ್ಟು.

ಕಡೂರು ಡಿಸ್ಟ್ರಿಕ್ಟು ಸಬಾರ್ಡಿನೇಟ್ ಜಡ್ಜ್‌ರವರ ಕೋರ್ಟಿನಲ್ಲಿ.

1883ನೇ ಮಿಸಲೇನಿಯಸ್ ಕೇಸ್ ನಂಬರ್ 110.

ಸಿವಿಲ್ ಪ್ರೊಸಿಜ್ಯೂರ್ ಕೋಡ್ 20ನೇ ಅಧ್ಯಾಯದಲ್ಲಿ ನಮೂದಾಗುವ ವಿಷಯದಲ್ಲಿಯೂ ಮತ್ತು ಬೇಲೂರ ತಾಲ್ಲೂಕು ಮಲ್ಲಾಪುರದ ಮಠದಲ್ಲಿ ಯಿರುವ ಮಲ್ಲಿಕಾರ್ಜುನ ವಡೇರ ಅರ್ಜೀ ವಿಷಯದಲ್ಲಿಯು ಸಹ.

ಮೇಲಿಕಂಡ ಅರ್ಜೀದಾರ 1883ನೇ ಡಿಸಂಬರ್ 20ನೇ ತಾರೀಖಿನಲ್ಲಿ ಈ ಕೋರ್ಟಿಗೆ ಕೊಟ್ಟ ಅರ್ಜಿಯು ಸಿವಿಲ್ ಪ್ರೊಸಿಜ್ಯೂರ್ ಕೋಡ್ 20ನೇ ಅಧ್ಯಾಯದಲ್ಲಿ ನಮೂದಾಗುವ ಉದಹರಣೆಗಳ ಪ್ರಯೋಜನವನ್ನು ಹೊಂದುವದರ ಮೂಲಕ ಸದರೀ ಕೋಡ್ 351ನೇ ಪ್ರಕರಣ ಪ್ರಕಾರ ದಿವಾಳೀಯಾದವರೆಂಬದಾಗಿ ಅಪ್ಪಣೇ ಆಗಬೇಕೆಂದು ಕೋರಿಕೊಂಡಿರುವದರಿಂದ, ಸ್ಯ 1884ನೇ ಜನವರೀ 30ನೇ ದಿನ 11ಘಂಟೆಗೆ ಸದರೀ ಅರ್ಜೀ ವಿಷಯದಲ್ಲಿ ದರಿಯಾಫ್ತ್ ಮಾಡುವದರಿಂದ ಆ ಕಾಲದಲ್ಲಿ ಅರ್ಜೀದಾರ್ರು ಕೋರ್ಟು ರೂಬರೂ ಹಾಜ

ರಾಗಿ ಕೋರ್ಟಿನವರು ಅವರ ವಿಷಯವಾಗಿ ಹುಕ್ಕುಂ ಮಾಡುವ ವೇರಿಗೆ ಅವರು ನಡಕೊಳ್ಳತಕ್ಕದ್ದೆಂದು ಮತ್ತು ಐರ್ಜ ಲೇಶೇದಾರರಾದವರು ಹಾಜರಾಗಿ ಅವರ ಕೋರಿಕೆಯನ್ನ ಆಪೇಕ್ಷಿಸುವದಕ್ಕೆ ಸ್ವತಂತ್ರರಾಗಿರುತ್ತಾರೆಂದು ಈ ಮೂಲಕ ನೋಟೀಸ್ ಕೊಡಲ್ಪಟ್ಟು ಇರುತ್ತದೆ.

ತಾರೀಖು 22ನೇ ಡಿಸಂಬರ್ 1883ನೇ ಇಸವಿ, ಮೊಕ್ಕಾಂ ಚಿಕ್ಕಮಗಳೂರು.

ಬಿ. ತಿರುವೆಲಾಚಾರ್,
ಸಬ್ ಜಡ್ಜ.

ಗೈರ್‌ವಿಲಾ ಆದ ಪೂರಾ ನೋಟೀ.

ನಂಬರು.	ಸರ್ಕಲ್.	ಕ್ಯಾಮು.	ಹಕ್ಕುದಾರ.
7914	ಮದರಾಸ್.	ರೂಪಾಯಿ 20	ಮೈಸೂರು ಡಿಸ್ಟ್ರಿಕ್ಟ್ ಮಂಡ್ಯ ತಾಲ್ಲೂಕು ರೆವಿನ್ಯೂ ಗುಮಾಸ್ತೆ ಪುಟ್ಟಣ್ಣ.

ಮೈಸೂರು ಗೆಜೆಟ್, ಚಂದಾ ದರ ವಗೈರೆ.

	ಚಂದಾ. ರೂ. ಆ.	ಟಪ್ಪಾಲ್ ಹಾಸಲು ಮೈಸೂರು ಶೀವೆ ಶಿವಾಯಿ ಇತರ ಸ್ಥಳಗಳಿಗೆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8

ಫಸ್ಟ್ ಮಾಹೆ ಯಾ ಕ್ವಾರಟರಿಗೆ ದಾವಾಯಿ ಪ್ರಕಾರ ದರಗಳು.

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಗೆ ನೋಟೀಸುಗಳು;— ರೂ. ಆ.

ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಗೆ (ಇಂಗ್ಲೀಷು ಅಥವಾ ಕನ್ನಡ) . . 2 8

ಯರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ 1 4

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 347ನೇ ಸೆಕ್ಷರ್ಷ ಅನುಸರಿಸಿ, ದಿವಾಳೀ ಅಪ್ಲಿಕೇಷರ್ಷಗಳ ಬಗ್ಗೆನೋಟೀಸ್‌ಗಳಿಗೆ:—

ಮೊದಲನೇ ದಫಾ 5 0

ಯರಡನೇ ವ ಆ ತರುವಾಯ ಪ್ರತಿ ದಫಾಕ್ಕೆ 2 8

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 354ನೇ ಸೆಕ್ಷರ್ಷ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯುಪ್ಲಿಕೇಟ್ ಸಾಫೀಪಟ್ಟೇ ವಗೈರೇ ಕೊಡುವ ಬಗ್ಗೆ ರೆವಿನ್ಯೂ ಆಫೀಸರ್‌ಗಳು ಕೊಡುವ ನೋಟೀಸ್‌ಗಳಿಗೆ:—

ಮೊದಲನೇ ಸಲಕ್ಕೆ . . ಪುಟ 1ಕ್ಕೆ . 10 0

ಯರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ „ . . 5 0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಜ್ಜಿ 1ಕ್ಕೆ . . 0 8

ಯರಡನೇ ದಫಾ ಡಿಟೋ ಡಿಟೋ . . 0 6

ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ 0 4

ಎಮೋಲ್ಯೂಮೆಂಟ್ ಹುಕ್ಕುಂ,
ಹೆಚ್. ಹಡರ್ಸ್,
ಮೈ. ಗೆ. ಕಂಪೈಲರ್.

Mysore Government Press, Bangalore.—1884.